MYSORE LEGISLATIVE ASSEMBLY

Thursday, 18th March 1965.

The House met in the Assembly Chamber, Vidhana Soudha, Bangalore, at Five Minutes past One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

Milk Producers' Co-operative Societies in the State.

*Q.—47. Sri ANDANIAH (Kunigal).—

Will the Government be pleased to state :—

(*a*) the number of Milk Producers' Co-operative Societies in the State that have been registered so far (District-war figures may be given) ;

(*b*) how many such Societies are in the process of being registered (District-war figures may be given) ;

(*c*) what is the condition precedent to be fulfilled before such Societies are registered ;

(*d*) how many such Societies are pending registration in the State for want of proper instructions (District-war information may be given) and since what date these Societies are kept pending without being registered ;

(*e*) what is the part played by the Project Co-ordinator in registering the societies ?

*A.—Sri RAMAKRISHNA HEGDE (Minister for Development, Panchayati Raj and Co-operation).—

(*a*) 321 as under :—

	District.	*No.*		*District.*	*No.*
1	Bangalore (Urban)	34	11	Bellary	8
2	Bangalore (Rural)	155	12	Kolar	43
3	Mandya	8	13	Belgaum	12
4	Mysore	4	14	Dharwar	9
5	Hassan	2	15	Karwar	4
6	Shimoga	5	16	Bijapur	2
7	South Kanara	11	17	Gulbarga	1
8	Chikkamagalur	1	18	Raichur	1
9	Tumkur	14	19	Bidar	1
10	Chitradurga	2	20	South Kanara.	4
					321

(SRI RAMAKRISHNA HEGDE)

(*b*) 39 as under :—

	District.	*No.*		*District.*	*No.*
1	Bangalore (Urban)	3	4	Belgaum	2
2	Bangalore (Rural)	27	5	Tumkur	5
3	Karwar	1	6	Shimoga	1

(*c*) (i) Existence of sufficient number of milch cattle and sufficient number of milk producers desirous of forming a Society.

(ii) Availability of sufficient quantity of milk.

(iii) Collection and deposit of at least Rs. 500 as initial deposit towards share capital.

(*d*) Nil.

(*e*) Project Co-ordinator (Director, Bangalore Dairy) selects the places after obtaining reports from the Assistant Registrar of Co-operative Societies, Bangalore Dairy.

ಶ್ರೀ ಅಂದಾನಯ್ಯ.—(ಇ) ಗೆ ಉತ್ತರವಾಗಿ ಹೇಳಿದ್ದೀರಿ—The Assistant Registrar inspects and submits a report; ಆ ತರಹ ಡೈರೆಕ್ಟರು ರಿಜಿಸ್ಟರು ಮಾಡುತ್ತಾರೆ ಅಂತ. ಆದರೆ ತುಮಕೂರು ಡಿಸ್ಟ್ರಿಕ್ಟ್ ಕುಣಿಗಲ್ ತಾಲ್ಲೂಕಿನಲ್ಲಿ ಅವಕ್ಕೆ ತದ್ವಿರುದ್ಧವಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಅಂದಾನಯ್ಯ.—ತುಮಕೂರು ಜಿಲ್ಲೆಯಲ್ಲಿ 5 ಸೊಸೈಟಿಗಳು ರಿಜಿಸ್ಟರ್ ಆಗದೆ ಉಳಿದಿವೆ ಎಂದು ಹೇಳಿದ್ದೀರಿ. ಆ 5 ಸೊಸೈಟಿಗಳು ಯಾವುವು? ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಸೊಸೈಟಿಗಳು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಡಿಯೂರು ಮಿರ್ಕ್ ಪ್ರೊಡ್ಯೂಸರ್ಸ್ ಕೋ-ಆಪರೇಟೀವ್ ಸೊಸೈಟಿ, ಹುಣಮಾಚಹಳ್ಳಿ, ಇಪ್ಪಾಡಿ, ತರಿಕೆರೆ ಸಂತೆಮಾತೂರು.

ಶ್ರೀ ಆರ್. ಎಸ್. ಪಾಟೀಲ್.—ಬೆಳಗಾಂ ಜಿಲ್ಲೆಯಲ್ಲಿ ಎರಡು ಕೋ-ಆಪರೇಟೀವ್ ಸೊಸೈಟಿಗಳು ರಿಜಿಸ್ಟರ್ ಆಗುತ್ತಿವೆ ಎಂದು ಹೇಳಿದ್ದೀರಿ. ರಿಜಿಸ್ಟರ್ ಆಗುತ್ತಾ ಇರುವ ಸೊಸೈಟಿಗಳು ಯಾವುವು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬೆನಕನ ಹಳ್ಳಿ, ಬೆಳಗಾಂ ತಾಲ್ಲೂಕು. ರಾಮದುರ್ಗ ಕೋ-ಆಪರೇಟಿವ್ ಸೊಸೈಟಿ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲಿ ಹಾಲು ನಡೆಯುತ್ತಿರುವ ಹಾಲಿನ ಸಹಕಾರ ಸಂಘಗಳೆಷ್ಟು? ಯಾವ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿ ಅದನ್ನು ಇನ್ನೂ ಜಿರ್ಣಾ ಬ್ಯಾಂಕಿಗೆ ಕೊಡುತ್ತಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತುಮಕೂರು ಜಿಲ್ಲೆಯಲ್ಲಿ ಎಷ್ಟು ಮಿರ್ಕ್ ಪ್ರೊಡ್ಯೂಸರ್ ಸೊಸೈಟಿಗಳಿವೆ ಎಂದು ಕೇಳಿದ್ದಾರೆ, ಅದನ್ನು ಅಲ್ಲಿ ಕೊಟ್ಟಿದ್ದೇವೆ. ಅವುಗಳ ಕೆಲಸವೆ ಇನ್ನೂ ಶುರುವಾಗಿಲ್ಲ. ಅದಕ್ಕೆ ಮುಂಚೆಯೇ ಹಣ ದುರುಪಯೋಗವಾಗಿದೆಯೆ ಎಂದು ಕೇಳುತ್ತಾರೆ, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗದಲ್ಲಿ 5 ಸಹಕಾರ ಸಂಘಗಳಿವೆ. ಅವುಗಳು ಎಲ್ಲೆಲ್ಲಿವೆ ಮತ್ತು ಎಷ್ಟೆಷ್ಟು ಹಾಲು ಸಪ್ಲೈ ಮಾಡುತ್ತಿವೆ ?

Sri RAMAKRISHNA HEGDE.—I have no detailed information with regard to other districts.

ಶ್ರೀ ಸಿ. ಆರ್. ರಂಗೇಗೌಡ.—ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 155 ಸೊಸೈಟಿಗಳಿವೆ. ಈ ಸೊಸೈಟಿಗಳು ರಿಜಿಸ್ಟರ್ ಆಗಿ ಎರಡು ವರ್ಷವಾಗಿದ್ದರೂ ಅವುಗಳಿಗೆ ಕೇಂದ್ರ ಬ್ಯಾಂಕಿನಿಂದಾಗಲಿ, ಡಿಸ್ಟ್ರಿಕ್ಟ್ ಬ್ಯಾಂಕಿನಿಂದಾಗಲಿ ಹಣ ಮಂಜೂರಾಗಿಲ್ಲ. ಹಣ ಮಂಜೂರಾಗಿದ್ದರೆ, ಆ ಸೊಸೈಗಳು ಯಾವುವು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಣ ಯಾವುದಕ್ಕೆ ಮಂಜೂರಾಗಿದೆ, ಯಾವುದಕ್ಕೆ ಆಗಿಲ್ಲವೆಂದು ಈಗ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಹಣ ಅನೇಕ ಸೊಸೈಟಿಗಳಿಗೆ ಮಂಜೂರಾಗಿದೆ. ನಮ್ಮ ಸ್ಕೀಮ್ ಪ್ರಕಾರ, ಪ್ರತಿಯೊಂದು ಸೊಸೈಟಿಗೂ ರಿಜಿನ್ವರ್ ಆದಕೂಡಲೆ 5 ಸಾವಿರ ರೂಪಾಯಿ ಷೇರ್ ಕ್ಯಾಪಿಟಲ್ ಕೊಡುತ್ತೇವೆ. ಅವರ ಬಾರೋಯಿಂಗ್ ಕೆಪ್ಯಾಸಿಟಿ ಹೆಚ್ಚಾಗಬೇಕು ಅನ್ನುವ ದೃಷ್ಟಿಯಿಂದ ಅಪೆಕ್ಸ್ ಬ್ಯಾಂಕಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಕೇಂದ್ರ ಬ್ಯಾಂಕುಗಳಿಗೆ ನಾವು ಷೇರ್ ಕ್ಯಾಪಿಟಲ್ ಕೊಟ್ಟಿದ್ದೇವೆ. ಎಲ್ಲಾ ಸೇರಿ ಪ್ರೈಮರಿ ಕೊ ಆಪರೇಟಿವ್ ಸೊಸೈಟಿಗಳಿಗೆ 5 ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆ. ಅಪೆಕ್ಸ್ ಬ್ಯಾಂಕಿಗೆ 9 ಲಕ್ಷ ಡಿಸ್ಟ್ರಿಕ್ಟ್ ಕೊ ಆಪರೇಟಿವ್ ಬ್ಯಾಂಕಿಗೆ (ಬೆಂಗಳೂರು) 1.25 ಲಕ್ಷ, ಕೋಲಾರ ಡಿಸ್ಟ್ರಿಕ್ಟ್ ಬ್ಯಾಂಕ್ : 1ಲಕ್ಷ, ತುಮಕೂರಿಗೆ 0.25 ಲಕ್ಷ—ಇಷ್ಟು ಕೊಟ್ಟಿದ್ದೇವೆ. ಈ ಬ್ಯಾಂಕುಗಳ ಮುಖಾಂತರವಾಗಿ ಪ್ರೈಮರಿ ಸೊಸೈಟಿ ಗಳಿಗೆ ಸಹಾಯ ಮಾಡಬೇಕೆಂಬುದೇ ಉದ್ದೇಶ. ಈಗ ಗೊತ್ತಾಗಿರುವ ಇನ್‌ಫರ್ಮೇಶನ್ ಪ್ರಕಾರ 56 ಸೊಸೈಟಿಗಳಿಗೆ ಬೆಂಗಳೂರು ಜಿಲ್ಲೆಯಲ್ಲಿ 12 ಲಕ್ಷ ರೂಪಾಯಿಯಷ್ಟು ಸಾಲವನ್ನು ಕೊಟ್ಟಿದ್ದೇವೆ.

ಶ್ರೀ ಆರ್. ಎನ್. ಪಾಟೀಲ್. ರಾಂದುರ್ಗ ಸೊಸೈಟಿ in the process of being registered ಎಂದು ಹೇಳಲಾಯಿತು. ಎಷ್ಟು ದಿವಸದ ಹಿಂದೆ ತಮ್ಮ ಹತ್ತಿರ ಆ ವರದಿ ಬಂದಿದೆ ಯೆಂದು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ನಮ್ಮ ಹತ್ತಿರ ಬರುವುದಿಲ್ಲ. ಅದಕ್ಕೆ ಕೆಲವೊಂದು ಪ್ರೊಸೀಜರ್ ಇರುತ್ತದೆ. ಆಫೀಸರು ಹೋಗಿ ಡೈರಿ ಕೊ ಆಪರೇಟಿವ್ ಸೊಸೈಟಿ ಮಾಡುವುದು ಸಾಧ್ಯವೆ ಎಂದು ತನಿಖೆ ಮಾಡಬೇಕು. ಇದು ಬಾಕಿ ಸೊಸೈಟಿ ಹಾಗಲ್ಲ. ಪ್ರಾರಂಭ ಮಾಡಿಬಿಟ್ಟು ನಡೆಯದೆ ಇದ್ದರೆ ಕೆಟ್ಟ ಹೆಸರು ಬರುತ್ತದೆ. ಸ್ವಲ್ಪ ಸಮಯ ಹಿಡಿಯುತ್ತದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಯ ಒಂದು ಸಹಕಾರ ಸಂಘದಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಹಣವನ್ನು ದುರುಪಯೋಗಪಡಿಸಿದರು ಎಂದು ಅವರನ್ನು ಪೋಲೀಸರು ಹುಡುಕುತ್ತಿದ್ದಾರೆನ್ನುವುದು ಸರಕಾರದ ಗಮನಕ್ಕೆ ಬಂದಿಯೇ ?

ಶ್ರೀ ರಾಮಕೃಷ್ಣಹೆಗ್ಗಡೆ.—ಅದು ಗಮನಕ್ಕೆ ಬಂದಿಲ್ಲ.

ಶ್ರೀ ನಂಜೀವನಾಥ ಐಕಳ.—ಉತ್ತರದಲ್ಲಿ ಕೊಟ್ಟಿರುವ ಐಟಂ (7) ರಲ್ಲಿ 11 ಎಂದಿವೆ ಹಾಗೂ ಐಟಂ (20) ರಲ್ಲಿ 4 ಎಂದಿದೆ. ಪಟ್ಟಿಯಲ್ಲಿ ಇದನ್ನು ಮರೆತು ತಪ್ಪಾಗಿದೆಯೋ ಹೇಗೆ ?

Sri RAMAKRISHNA HEGDE.—There is absolutely no difference. It is only a typing mistake.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಬೆಂಗಳೂರು ಜಿಲ್ಲೆಯಲ್ಲಿರುವ ನೆಲಮಂಗಲದಲ್ಲಿ ಏಳೆಂಟು ಹಾಲಿನ ಸೊಸೈಟಿಗಳಿಗೆ ಹಾಲನ್ನು ಕೊಟ್ಟ ರೈತರುಗಳಿಗೆ ಹಣವನ್ನು ಕೊಡವೇ ಅವರಿಗೆ ತುಂಬಾ ತೊಂದರೆಯಾಗಿದೆ. ಅಲ್ಲಿನ ರೈತರು ಯಾರಾದರೂ ತಮ್ಮಲ್ಲಿಗೆ ಬಂದು ದೂರುಕೊಟ್ಟಿದ್ದಾರೆಯೇ ? ಹಾಗೆ ನಾವು ಈಗ ದೂರನ್ನು ಕಳುಹಿಸಿದರೆ ಅವರ ಬಗ್ಗೆ ತಕ್ಕ ಕ್ರಮ ತೆಗೆದು ಕೊಳ್ಳುತ್ತೀರಾ ಹೇಗೆ? ಇದರಲ್ಲಿ ಸುಮಾರು ಹತ್ತು ಸಾವಿರದಷ್ಟು ದುರುಪಯೋಗವಾಗಿದೆ. ಇದರ ದೂರು ಟೈಪ್ ಆಗುತ್ತಾ ಇದೆ. ಅದನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಟೈಪ್ ಆದದ್ದು ಬರಲಿ ನನ್ನ ಕೈಗೆ.

ಶ್ರೀ ಸಿ. ಆರ್. ರಂಗೇಗೌಡ.—ರಾಮು ದೇವನಹಳ್ಳಿಯಲ್ಲಿ ಒಂದು ಸಹಕಾರ ಸಂಘಕ್ಕೆ 24,850 ರೂಪಾಯಿಗಳಷ್ಟು ಸಾಲವಾಗಿ ಕೊಟ್ಟಿದ್ದಾರೆ. ಇಲ್ಲಿಗೆ ಅಲ್ಲಿನ ರೈತರು 12 ತಿಂಗಳು ಗಳ ಕಾಲ ಹಾಲನ್ನು ಸಪ್ಲೈ ಮಾಡಿದರೂ ಕೂಡ ಅವರಿಗೆ ಹಣಕೊಡವೇ ದುರುಪಯೋಗವಾಗಿದೆ, ಇದರಿಂದ ಅಲ್ಲಿನ ರೈತರಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಿದಮೇಲೆ ಇದನ್ನು ತನಿಖೆಮಾಡಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೂ ಆಗಲಲ್ಲ ಈಗ ಅದನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವಶ್ಯವಾಗಿ.

Sri H. R. KESHAVA MURTHY.—Don't you feel that in rural parts Societies cannot fulfil the supply of milk within the Plan period and it is a waste of national funds ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಗ್ರಹಿಕೆ ತುಂಬಾ ತಪ್ಪಾದುದು. ಯೋಜನೆಗೆ ವ್ಯತಿರಿಕ್ತವಾಗಿ ನಾವು ಯಾವುದನ್ನೂ ಮಾಡುತ್ತಿಲ್ಲ, ಎಲ್ಲವನ್ನೂ ಪ್ಲಾನು ರೀತಿಯಲ್ಲಿಯೇ ಮಾಡುತ್ತಿದ್ದೇವೆ. ಈಗ ನಾಲ್ಕನೆ ಯೋಜನೆ ಆರಂಭವಾಗುವುದರಲ್ಲಿದೆ, ಮೂರನೆ ಪಂಚ ವಾರ್ಷಿಕ ಯೋಜನೆಯ ಕೊನೆಯ ವರ್ಷ ಈಗ. ನಮ್ಮ ಅನಿಮಲ್ ಹಸ್‌ಬೆಂಡ್ರಿ ಹಾಗೂ ಸಹಕಾರ ಶಾಖೆಯವರು ಇಬ್ಬರೂ ಸೇರಿಕೊಂಡು ಪೈಸೂರು ರಾಜ್ಯದಲ್ಲಿ ಡೈರಿ ಡೆವಲಪ್‌ಮೆಂಟು ಮಾಡುವುದಕ್ಕೆ ಅವಕಾಶವಿದೆ. ಅದನ್ನು ಪ್ರತ್ಯೇಕವಾದ ಒಂದು ಸ್ಕೀಂನಂತೆ ಮಾಡಬೇಕೆಂದಿದೆ. ಈಗ ಬೆಂಗಳೂರಿನ ಸುತ್ತಮುತ್ತ 200 ಸೊಸೈಟಿಗಳನ್ನು ಸ್ಥಾಪನೆ ಮಾಲಾಗಿದೆ. ಇದರಲ್ಲಿ ಯಾವ ವಿಧವಾದ ವಿರೋಧವಾದಂತಹ ಅ ಕ್ರಮಗಳೂ ನಡೆದಿಲ್ಲ.

ಶ್ರೀಮತಿ ನುಸೀರಾಬಾಯಿ ಹೀರಾಚಂದ್ ಷಾ.—ಮುಂಬಯಿನಲ್ಲಿ ಅರೇ ಮಿಲ್ಕ್ ಕಾಲೋನಿಯಲ್ಲಿ ಕೊಡುವ ಹಾಲುಬಹಳ ಉತ್ತಮರೀತಿಯಲ್ಲಿರುತ್ತದೆ. ಮತ್ತು ಅವರು ಅದನ್ನು ಸರಿಯಾದ ಬಾಟಲುಗಳಲ್ಲಿ ಸೀಲುಮಾಡಿ ಕಳುಹಿಸುತ್ತಾರೆ. ಆದರೆ ನಮ್ಮಲ್ಲಿ ಡೈರಿಯಿಂದ ಕಳುಹಿಸುವ ಹಾಲು ಅಷ್ಟು ಚೆನ್ನಾಗಿಲ್ಲ, ಕೆನೆಯೇ ಇರುವುದಿಲ್ಲ ಇದಕ್ಕೇನು ಕಾರಣ ?

ರಾಮಕೃಷ್ಣ ಹೆಗ್ಗಡೆ.—ಇನ್ನೂ ನಮ್ಮಲ್ಲಿ ಯೋಜನೆ ಸಂಪೂರ್ಣವಾಗಿ ಕಾರ್ಯಗತವಾಗಿಲ್ಲ. ಅದು ಪೂರ್ತಿಯಾದ ಮೇಲೆ ತಮಗೆ ಒಳ್ಳೆಯ ಅಮೃತದಂತಹ ಹಾಲನ್ನು ಕೊಡುತ್ತೇವೆ. ಆಗ್ಗ ಬೇಕಾದರೆ ಮಾನ್ಯ ಸದಸ್ಯರಿಗೂ ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಡೈರಿಯೋಜನೆಯಲ್ಲಿ ಬೆಂಗಳೂರು ಸುತ್ತಮುತ್ತ ಮಾಡಿರುವ ಹಾಲಿನ ಸೊಸೈಟಿಗಳಲ್ಲಿ ಎಷ್ಟು ಸೊಸೈಟಿಗಳಿಂದ ಹಣ ದುರುಪಯೋಗವಾಗಿದೆ ಎಂದು ದೂರು ಬಂದಿವೆ ಮತ್ತು ಅದರ ಮೇಲೆ ಏನುಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯಸದಸ್ಯರು ಅವರಿಗೆ ಬಂದ ಅರ್ಜಿಗಳ ದೂರನ್ನು ನನಗೆ ವರ್ಗಾಯಿಸಿಸಲ, ಅದರ ಮೇಲೆ ಏನು ಕಾರ್ಯ ಕ್ರಮ ತೆಗೆದುಕೊಳ್ಳಬೇಕೋ ನೋಡೋಣ.

ಶ್ರೀ ಟಿ. ಮಾದಯ್ಯ ಗೌಡ.—ಸೊಸೈಟಿಗಳು ರಿಜಿಸ್ಟರು ಆಗಬೇಕಾದರೆ ಗ್ರಾಮದಲ್ಲಿ ಸಾಕಷ್ಟು ಗಳು ಇರಬೇಕು. ಬೆಂಗಳೂರು ಜಿಲ್ಲೆಯಲ್ಲಿ ಸುಮಾರು 155 ಸೊಸೈಟಿಗಳಾಗಿರುವುದರಲ್ಲಿ ಎಷ್ಟು ಹಸುಗಳು ಕರೆಯುತ್ತವೆ ಮತ್ತು ಬೇರೆ ಕಡೆಯಿಂದ ಹಸುಗಳನ್ನು ತರಿಸಿ ಹಾಲನ್ನು ಕರೆಯಿಸಿ ಕೊಡುತ್ತಿದ್ದೀರಾ ಹೇಗೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಸುಗಳನ್ನು ಬೇರೆ ಕಡೆಯಿಂದ ತರಿಸಿಕೊಂಡು ನಷ್ಟೈ ಮಾಡುವ ಹಸುಯೋಜನೆಯೂ ಇದೆ. ಆ ರೀತಿ ಈಗ ಮಾಡುವುದಕ್ಕೆ ಸಾಧ್ಯವಿಲ್ಲ. ಸರಕಾರದ ಉದ್ದೇಶ ಏನಿದೆ ಎಂದರೆ ಒಳ್ಳೆಯ ಗೂಳಿಗಳನ್ನು ತರಿಸಿ ಇಲ್ಲಿನ ತಳಿಗಳನ್ನು ಸುಧಾರಣೆ ಮಾಡಿ ಸುತ್ತ ಮುತ್ತ ಸಾಮಿರಾರು ಹಸುಗಳನ್ನು ಮಾಡುವ ಪ್ರಪೋಸಲ್ಲು ಸರಕಾರದ ಯೋಚನೆಯಲ್ಲಿದೆ.

ಶ್ರೀ ಅಂದಾನಯ್ಯ.—ಇಪ್ಪಾಡಿ ಸಹಕಾರ ಸಂಘವನ್ನು ಒಬ್ಬರು ಇನ್ಸ್‌ಪೆಕ್ಟರವರು ಇನ್ಸ್‌ಪೆಕ್ಷನ್ನು ಮಾಡಿ ಅಲ್ಲಿ ಒಬ್ಬರು ತಾಲ್ಲೂಕು ಬೋರ್ಡು ಮೆಂಬರಾದವರು ರಿಜಿಸ್ಟರು ಮಾಡದೆ ಸೊಸೈಟಿ ಮಾಡುತ್ತಿದ್ದಾರೆ ಎಂದು ಹೇಳಿದ್ದರೂ ಇದುವರೆಗೆ ಅದನ್ನು ರಿಜಿಸ್ಟರು ಮಾಡದೇ ಇರಲು ಕಾರಣವೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ಮುಂದೆ ಇರುವ ವರದಿಯಂತೆ ಅಲ್ಲಿ ಇನ್ನೂ ತನಿಖೆ ಸಂಪೂರ್ಣವಾಗಿ ಮುಗಿದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕುಣಿಗಲ್ ತಾಲ್ಲೂಕಿನಲ್ಲಿರುವ ಸಹಕಾರಸಂಘಗಳನ್ನು ರಿಜಿಸ್ಟರು ಮಾಡದೆ ಇರುವುದಕ್ಕೆ ಕಾರಣ ಅಲ್ಲಿ ರಾಜಕೀಯ ಕೈವಾಡ ನಡೆಯುತ್ತಿರುವುದು ಸರಕಾರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಮಾನ್ಯ ಸದಸ್ಯರ ತಲೆಯಲ್ಲಿರುವ ಒಂದು ಭ್ರಮೆ ಎಂದು ನಾನು ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ರೆವೆನ್ಯೂ ಮಂತ್ರಿಗಳು ದೆಹಲಯಲ್ಲಿದ್ದಾಗ ಇಲ್ಲಿಗೆ ಹಸುಗಳನ್ನು ನಷ್ಟೈ ಮಾಡುತ್ತಿದ್ದರು. ಈಗ ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರೂ ಹಸುಗಳನ್ನು ತರಿಸುವ ಕೆಲಸದಲ್ಲಿರುವುದರಿಂದ ಇಬ್ಬರೂ ಸೇರಿಕೊಂಡು ನಮಗೆ ಒಳ್ಳೆಯ ಹಸುಗಳನ್ನು ನಷ್ಟೈ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಲೂ ಬೇಕಾದರೂ ತರಿಸುತ್ತೇನೆ. ತಮಗೆ ಬೇಕಾದರೆ ನನಗೆ ಕಾಗದ ಬರಿಯಿರಿ. ಈಗಲೂ ಮೂರುನಾಲ್ಕು ಮುದಿ ದನಗಳನ್ನು ಕೊಡೋಣ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಐದು ಸೊಸೈಟಿಗಳಿವೆ ಎಂದು ಹೇಳಿದ್ದೀರಿ. ಅವು ಎಲ್ಲೆಲ್ಲವೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರಿಗೆ ಬೇಕಾದರೆ ಅ ಮೇಲೆ ಈ ವಿವರ ಕೊಡುತ್ತೇನೆ.

Tours undertaken by Ministers and Deputy Ministers during the month of May 1964

*Q.—61. SANJEEVANATH AIKALA (Surathkal).—

Will the Government be pleased to state:—

(*a*) the total amount of T.A. and D.A. drawn by each Minister and the Deputy Minister for the month of May 1964 for the tours undertaken during this month ;

(*b*) the amount of T.A. and D.A. drawn by their Persona Assistants, staff members and other accompanies for the tours while accompanying the Ministers and the Deputy Ministers referred above or the month of May 1964 ;

(*c*) the names of the District Headquarters in the State in whichr these Ministers and Deputy Ministers touched or covered during the course of their tour programme ?

A.—Sri S. NIJALINGAPPA (Chief Minister).—

(*a*) to (*c*) *Vide* Statement appended.

Sl. No.	Minister/ Deputy Minister	T.A. & D.A. drawn by Ministers/ Deputy Ministers		T. A. & D. A. Drawn by the personal Staff		Names of District Headquarters touched or covered
		T.A.	D.A.	T.A.	D.A.	
1	2	3	4	5	6	7
1	Chief Minister	2195.69	297.50	841.90	173.75	Dharwar, Shimoga Mangalore, Mercara, Mysore, Chitradurga, Gulbarga and Raichur